ಪ್ರವಾಸ


ಡಬ್ಲಿನ್ ನಗರದ ಸುಂದರ ಬೀದಿ

# ಡಬ್ಲಿನ್

## ಐರ್ಲೆಂಡ್‌ನ ಸೂಜಿಗಲ್ಲು

**ಐರ್ಲೆಂಡ್‌ನ ಡಬ್ಲಿನ್ ರಾಜಧಾನಿಯಲ್ಲಿ ನೋಡಲೇಬೇಕಾದ ಹಲವು ಸ್ಥಳಗಳಿವೆ. ಅವುಗಳಲ್ಲಿ ತಮ್ಮ ಸೌಂದರ್ಯ, ಇತಿಹಾಸ, ಭಿನ್ನ ಜೀವನಶೈಲಿಯಿಂದ ಗಮನಸೆಳೆಯುವ ತಾಣಗಳಿವು...**

**ಎಸ್. ಶಶಿಧರ**


ಬೃಹದಾಕಾರದ ಬಂಡೆಗಲ್ಲುಗಳ 'ಕ್ಲಿಫ್ಸ್ ಆಫ್ ಮೊಹರ್'

ಕೆಲವು ತಿಂಗಳ ಹಿಂದೆ, ಐರ್ಲೆಂಡ್‌ಗೆ ಹೋಗುವ ಅವಕಾಶ ಒದಗಿಬಂದಿತ್ತು. ಆ ಅವಕಾಶದ ಬೆನ್ನಲ್ಲೇ, ಐರ್ಲೆಂಡ್ ಕುರಿತು ಒಂದಿಷ್ಟು ಮಾಹಿತಿ ತಿಳಿದುಕೊಂಡು ಹೊರಡಲು ಅಣಿಯಾದೆವು.

ಐರ್ಲೆಂಡ್‌ನಲ್ಲಿ ಎರಡು ಭಾಗಗಳಿವೆ. ರಿಪಬ್ಲಿಕ್ ಆಫ್ ಐರ್ಲೆಂಡ್ ಒಂದು ಸಾರ್ವಭೌಮ ದೇಶ ಎನಿಸಿ ರಾಜರ ಆಳ್ವಿಕೆಗೆ ಒಳಗಾಗಿದ್ದರೆ, ಮತ್ತೊಂದು ಭಾಗ ನಾರ್ದರ್ನ್ ಐರ್ಲೆಂಡ್ ಯುನೈಟೆಡ್ ಕಿಂಗ್‌ಡಂ ಭಾಗವಾಗಿಯೇ ಉಳಿದಿದೆ. ವಿಸ್ತೀರ್ಣದಲ್ಲಿ ದೊಡ್ಡದಾಗಿ, ಇಂಗ್ಲೆಂಡ್ ಮತ್ತು ವೇಲ್ಸ್‌ನ ಕರಾವಳಿ ಪ್ರದೇಶದಲ್ಲಿರುವ ರಿಪಬ್ಲಿಕ್ ಆಫ್ ಐರ್ಲೆಂಡ್‌ನಲ್ಲಿ ಬಹಳಷ್ಟು ಪ್ರತಿಷ್ಠಿತ ವಿದ್ಯಾಸಂಸ್ಥೆಗಳಿವೆ. ಇದರ ರಾಜಧಾನಿ ಡಬ್ಲಿನ್‌ನಲ್ಲಿ, ಯುನಿವರ್ಸಿಟಿ ಕಾಲೇಜ್ ಆಫ್ ಡಬ್ಲಿನ್, ಟ್ರಿನಿಟಿ ಕಾಲೇಜ್, ಡಬ್ಲಿನ್ ಸಿಟಿ ಯೂನಿವರ್ಸಿಟಿ ಹೀಗೆ ಹಲವಾರು ಖ್ಯಾತ ಶೈಕ್ಷಣಿಕ ಸಂಸ್ಥೆಗಳಿವೆ.

ಮೊದಲೆಲ್ಲಾ ವಿದ್ಯಾರ್ಥಿಗಳು ತಮ್ಮ ಉನ್ನತ ವಿದ್ಯಾಭ್ಯಾಸಕ್ಕೆ ದೂರದ ಅಮೆರಿಕ, ಕೆನಡಾ ದೇಶಗಳಿಗೆ ಹೆಚ್ಚಾಗಿ ಹೋಗುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಬೇರೆ ದೇಶಗಳಲ್ಲೂ ಅವಕಾಶಗಳು ಹೆಚ್ಚಾಗಿ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ. ಹೀಗೆ ಹಲವಾರು ದೇಶಗಳಿಂದ ವಿದ್ಯಾರ್ಥಿಗಳನ್ನು